ಬಿಡುತ್ತದೆ. ''ವಿವರಿಸುವುದು ಎಂದರೆ ಅದನ್ನು ಅತಿಯಾಗಿ ಬಳಸುವುದಕ್ಕೆ ಸಮಾನವಾದದ್ದು, ಅದು ಅದನ್ನು ನಾಶ ಮಾಡಿಬಿಡುತ್ತದೆ, ಅದು ಬಣ್ಣಗೆಡುತ್ತದೆ, ಅದರ ಅಂಚುಗಳು ಸವೆಯುತ್ತವೆ ಮತ್ತು ಗುಣಸ್ವಭಾವಗಳನ್ನು ಮುಕ್ಕಾಗಿಸಿ ಬಿಡುತ್ತದೆ ಮತ್ತು ಕೊನೆಗೆ ಯಾವುದನ್ನು ವಿವರಿಸತೊಡಗಿದ್ದಿರೋ ಅದು ಶಿಥಿಲಗೊಳ್ಳಲು ಶುರುವಾಗಿ ಕೊನೆಗೆ ಮಾಯವಾಗಿ ಬಿಡುತ್ತದೆ. ಸತ್ಯವೆನ್ನುವುದು ಭಯಂಕರವಾಗಿಯೇ ಇರುತ್ತದೆ. ವಿವರಿಸುವುದು ಎಂದರೆ ನಿವಾರಿಸುವುದು.''

ಹಾಗೆಯೇ ಈ ಕಾದಂಬರಿಯಲ್ಲಿ ದೇಹವನ್ನು, ಅದರ ಭಾಗಗಳನ್ನು ಶಾಶ್ವತವಾಗಿ ಸಂರಕ್ಷಿಸಿಡುವ ವೈಜ್ಞಾನಿಕ ವಿಧಿವಿಧಾನಗಳ ಬಗ್ಗೆ ವಿವರವಾದ ನಿರೂಪಣೆಯಿದೆ. ವಿವಿಧ ನಮೂನೆಯ ಅಂದರೆ, ಎರಡು ತಲೆಯ, ಎರಡು ದೇಹಗಳ ಭ್ರೂಣಗಳು, ಕತ್ತರಿಸಿ ತೆಗೆಯಲಾದ ಅಂಗಾಂಗಗಳು, ಅಪರೂಪದ ತಳಿಯ ಪ್ರಾಣಿಗಳ ದೇಹವನ್ನು ಆಲ್ಕೋಹಾಲ್ ಮತ್ತು ರಾಸಾಯನಿಕಗಳ ಮಿಶ್ರಣದಲ್ಲಿ ಬಾಟಲು, ಜಾರುಗಳಲ್ಲಿ ಕೆಡದಂತೆ ಸಂರಕ್ಷಿಸಿಡಲಾಗುತ್ತದೆ. ಇಲ್ಲಿ ಬರುವ ಹಲವಾರು ವಿಜ್ಞಾನಿಗಳು, ವೈದ್ಯರು ಮತ್ತು ಸರ್ಜನ್ನರ ಕತೆಗಳಲ್ಲಿ ಈ ವಿಧಿವಿಧಾನಗಳು, ಒಂದು ಹವ್ಯಾಸವಾಗಿ, ಆಸೆಯಾಗಿ, ಅತಿಯಾದ ವ್ಯಾಮೋಹವಾಗಿ ಬೇರು ಬಿಟ್ಟಿರುವುದನ್ನು ಕಾಣಬಹುದಾಗಿದೆ.

ಕತೆಯನ್ನು ಹೇಳುವ ಮತ್ತು ಏನನ್ನಾದರೂ ಸಂರಕ್ಷಿಸಿಡುವ ಎರಡೂ ಪ್ರಕ್ರಿಯೆಗಳು ನಾಶವಾಗುವ ಮತ್ತು ಶಾಶ್ವತವಾಗುವ ಭಯ ಮತ್ತು ಹಂಬಲದ ನಡುವೆ ತುಯ್ಯುತ್ತಿರುತ್ತವೆ. ಇಲ್ಲಿನ ಪ್ರತಿಯೊಂದು ಪಯಣವೂ, ನಮ್ಮ ನಿಮ್ಮ ಎಲ್ಲ ಪ್ರಯಾಣಗಳಂತೆಯೇ ಒಂದು ಕ್ಷಣಭಂಗುರ ತತ್ತ್ವಕ್ಕೆ ಬದ್ಧವಾಗಿಯೇ ಇರುತ್ತವೆ. ಆದರೆ ಅದನ್ನು ಮೀರಲು ನಾವು ನಮ್ಮದೇ ಆದ ಪರ್ಯಾಯ ಉಪಾಯಗಳನ್ನು ಕಂಡುಕೊಂಡಿರುತ್ತೇವೆ. ಇದೇ ಮಾತು ಇಲ್ಲಿ ಬರುವ ಪ್ರತಿಯೊಂದು ಕತೆಗೂ ಅನ್ವಯವಾಗುತ್ತದೆ. ಎಲ್ಲ ಬದುಕುಗಳೂ ನಶ್ವರತೆಯ, ಕ್ಷಣಭಂಗುರತೆಯ ಪಸೆಯನ್ನು ಹೊಂದಿಯೇ ಇವೆ. ಯಾರ ಬದುಕು ಯಾವಾಗ ಹೇಗೆ ಮುಗಿದು ಬಿಡುವುದೋ ಯಾರಿಗೂ ಗೊತ್ತಿಲ್ಲ. ಕತೆಗಳು ನಿರ್ದಿಷ್ಟ ಅಂತ್ಯಕ್ಕಾಗಿ ಕಾಯುತ್ತಿಲ್ಲ. ಆದರೆ ಜನ ಹೇಗಾದರೂ ಸರಿ ಎಲ್ಲವನ್ನೂ ಶಾಶ್ವತಗೊಳಿಸಲು, ಕಾಪಿಡಲು ಆಕೃತಿಯನ್ನು ತೊಡಿಸಲು ಮತ್ತು ತನ್ಮೂಲಕ ಅದಕ್ಕೆ ಅರ್ಥವನ್ನು ಹಚ್ಚಲು ಪಣತೊಟ್ಟಂತೆ ಫೋಟೊ ತೆಗೆಯುವುದು, ಪ್ರವಾಸಕಥನ ಬರೆಯುವುದು, ದಿನಚರಿಯಲ್ಲಿ ವಿವರಗಳನ್ನು ಟಿಪ್ಪಣಿ ಮಾಡಿಕೊಳ್ಳುವುದು ಎಂದೆಲ್ಲ ಮಾಡಿದರೆ ವಿಜ್ಞಾನಿಗಳು ತಮ್ಮದೇ ಆದ ಬಗೆಯಲ್ಲಿ ಪ್ರಯೋಗಗಳನ್ನು, ಪ್ರನಾಳಗಳಲ್ಲಿ, ಸಂರಕ್ಷಕ ದ್ರಾವಣಗಳಲ್ಲಿ ಶಾಶ್ವತವಾಗಿ ಕಾಪಾಡಿಕೊಳ್ಳಲು ಪ್ರಯತ್ನ ನಡೆಸುತ್ತಲೇ ಇರುತ್ತಾರೆ.

ಇಲ್ಲಿ ಬರುವ ತುಂಡು ತುಂಡು ಕಥಾನಕಗಳಿಂದ ಒಟ್ಟಾರೆಯಾಗಿ ಬದುಕನ್ನು ತಾನು ಪುನರ್‌ವ್ಯಾಖ್ಯಾನಕ್ಕೊಡ್ಡುತ್ತಿದ್ದೇನೆ ಎಂದು ಹೇಳಿಕೊಳ್ಳುವ ನಿರೂಪಕಿಯ ಮಾತನ್ನು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಕಾದಂಬರಿಯ ತೆಕ್ಕೆಗೆ ಬರುವ ಎಲ್ಲಾ ಗಂಭೀರ ವಿದ್ಯಮಾನಗಳನ್ನು ನಿರೂಪಿಸುವಾಗಲೂ ಏನೋ ಒಂದು ಲಘುವಾದ ಆಯಾಮವನ್ನು ಬಳಸಿಕೊಂಡಿರುವಂತೆ ಕಾಣುವುದು ಕೂಡ ಸುಳ್ಳಲ್ಲ. ಹಾಗಾಗಿ ಈ ನಿರೂಪಣೆಯ ಹೊಸತನ ಏನಿದೆ ಅದು ಅಸ್ತಿತ್ವವಾದವನ್ನು ನಿರಾಕರಿಸುತ್ತ ಇದೆ ಎನ್ನುವುದೂ ಸರಿಯಲ್ಲ, ಎತ್ತಿ ಹಿಡಿಯುತ್ತದೆ ಎನ್ನುವುದೂ ಸರಿಯಲ್ಲ ಎಂಬ ನಿಲುವಿಗೆ ನಮ್ಮನ್ನು ತಲುಪಿಸುತ್ತದೆ. ಈ ನಿಟ್ಟಿನ ಒಂದು ಮನೋಧರ್ಮವಿಲ್ಲದೇ ಹೋದರೆ ನಮಗೆ ಇಲ್ಲಿ ಥಟ್ಟನೆ ಬರುವ ಕಥಾನಕಗಳ ಕೃತಕವಾದ ಅನಿರೀಕ್ಷಿತ ಆರಂಭ ಮತ್ತು ಅದನ್ನು ಎಲ್ಲಿ ಕೈಬಿಡಲಾಗುತ್ತದೆ ಎನ್ನುವುದರ ಕುರಿತಾದ ಅಜ್ಞಾನ ಎರಡೂ ಸೇರಿ ಕಾಣಿಸುವ ಒಳನೋಟಗಳನ್ನು ಕಂಡುಕೊಳ್ಳುವುದು ಸಾಧ್ಯವೇ ಆಗುವುದಿಲ್ಲವೇನೊ.